# ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಡಾ|| ವೈ.ಎ.ನಾರಾಯಣಸ್ವಾಮಿ ಇವರು ಪ್ರಸ್ತಾಪಿಸಿರುವ ಶೂನ್ಯ ವೇಳೆ ಪ್ರಸ್ತಾವನೆಗೆ ಉತ್ತರಿಸುವ ಬಗ್ಗೆ:-

## ವಿಷಯ:

ಇಂದಿನ ದಿನಪತ್ರಿಕೆಯಲ್ಲಿ ವರದಿಯಾಗಿರುವಂತೆ, "ಸರ್ಕಾರಿ ಶಾಲಾ ಮಕ್ಕಳಿಗೆ ಸಿದ್ಧ ಸಮವಸ್ತ್ರ ಇಲ್ಲ' ಎಂಬ ಶೀರ್ಷಿಕೆಯಡಿ ಕನ್ನಡ ಪ್ರಭ ಪತ್ರಿಕೆಯಲ್ಲಿ ವರದಿಯಾಗಿರುವ 2023-24ನೇ ಸಾಲಿನಲ್ಲಿ ಶಾಲಾ ಮಕ್ಕಳಿಗೆ ಈಗಾಗಲೇ ಒಂದು ಜೊತೆ ಸಿದ್ದಪಡಿಸಿದ ಸಮವಸ್ತ್ರ ನೀಡಿರುವ ಶಿಕ್ಷಣ ಇಲಾಖೆ,. ಇದೀಗ 2ನೇ ಜೊತೆ ನೀಡಲು ಸಿದ್ಧತೆ ನಡೆಸಿದೆ. ಆದರೆ ಈ ಎರಡನೇ ಜೊತೆ ಸಮವಸ್ತ್ರದ ಬಟ್ಟೆಯನ್ನು ಮಾತ್ರ ಸರ್ಕಾರ ಉಚಿತವಾಗಿ ನೀಡಲಿದ್ದು, ಬಟ್ಟೆಯ ಹೊಲಿಗೆ ವೆಚ್ಚವನ್ನು ಮಕ್ಕಳ ಪೋಷಕರೇ ಭರಿಸಬೇಕಾಗಿರುತ್ತದೆ.

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿವರೆಗೆ ಓದುತ್ತಿರುವ 45,45,749 ವಿದ್ಯಾರ್ಥಿಗಳ ಪೋಷಕರಿಗೆ ಸಮವಸ್ತ್ರದ ಬಟ್ಟೆಯನ್ನು ಹೊಲಿಸಿಕೊಳ್ಳುವ ವೆಚ್ಚ ಭರಿಸಬೇಕಾಗಿದ್ದು ಒಂದು ಜೊತೆ ಬಟ್ಟೆ ಹೊಲಿಸಲು ಅಂದಾಜು ಸರಾಸರಿ 600-700ರೂಗಳ ವೆಚ್ಚವಾಗಲಿದೆ. ಇದರಿಂದಾಗಿ ಬಡ ಪೋಷಕರಿಗೆ ಇದರಿಂದ ಹೊರೆಯಾಗಲಿದ್ದು, ಕೂಲಿ ಕೆಲಸ ಮಾಡುವ ಪೋಷಕರಿಗೆ ಇದರಿಂದಾಗಿ ಕಷ್ಟಕರವಾಗಿ ಆರ್ಥಿಕ ಹೊರೆಯಾಗಿ ಪರಿಣಮಿಸಿದೆ.

ಆದುದರಿಂದ, ಸರ್ಕಾರ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ, ಶೂನ್ಯ ವೇಳೆಯಲ್ಲಿ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

## ಉತ್ತರ :

ಶಿಕ್ಷಣ ಇಲಾಖೆಯಿಂದ ಸರ್ಕಾರಿ ಶಾಲಾ ಮಕ್ಕಳಿಗೆ ಎರಡು ಜೊತೆ ಸಮವಸ್ತ್ರಗಳನ್ನು ವಿತರಿಸಲಾಗುತ್ತಿದೆ.

1. **ಮೊದಲನೇ ಜೊತೆ ಸಮವಸ್ತ್ರ:-**

ಶಿಕ್ಷಣ ಇಲಾಖೆಯು ರಾಜ್ಯ ಸರ್ಕಾರದ ಅನುದಾನದಿಂದ ವಿದ್ಯಾವಿಕಾಸ ಯೋಜನೆಯಡಿ 1985-86ನೇ ಸಾಲಿನಿಂದ ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತ ಸಮವಸ್ತ್ರಗಳನ್ನು ವಿತರಿಸುತ್ತಾ ಬಂದಿದ್ದು, ಮಕ್ಕಳ ತರಗತಿಗನುಗುಣವಾಗಿ ವಿವಿಧ ಅಳತೆಯ ಸಮವಸ್ತ್ರ ಬಟ್ಟೆಗಳನ್ನು ಮಾತ್ರ ಸರಬರಾಜು ಮಾಡುತ್ತಾ ಬಂದಿದೆ. ಹಾಗೂ ಸದರಿ ಬಟ್ಟೆಗಳನ್ನು ಮಕ್ಕಳ ಪೋಷಕರೇ ಹೊಲಿಸಿಕೊಳ್ಳುತ್ತಾರೆ.

ಹಾಗೆಯೇ 2023-24ನೇ ಸಾಲಿನಲ್ಲಿಯೂ ಸರ್ಕಾರಿ ಶಾಲೆಗಳಲ್ಲಿನ 1 ರಿಂದ 10ನೇ ತರಗತಿಯ ಎಲ್ಲಾ ಮಕ್ಕಳಿಗೆ **ಮೊದಲನೇ ಜೊತೆ** ಸರಬರಾಜಿನಲ್ಲಿ ಸಮವಸ್ತ್ರ ಬಟ್ಟೆಗಳನ್ನು ಮಾತ್ರ ಸರಬರಾಜು ಮಾಡಲಾಗಿದೆ.

**2. ಎರಡನೇ ಜೊತೆ ಸಮವಸ್ತ್ರ:**

ಕೇಂದ್ರ ಹಾಗೂ ರಾಜ್ಯದ ಸಹಭಾಗಿತ್ವದಲ್ಲಿ 2013–14ನೇ ಸಾಲಿನಿಂದ 1 ರಿಂದ 8ನೇ ತರಗತಿಯ ಎಲ್ಲಾ ಮಕ್ಕಳಿಗೆ **ಎರಡನೇ ಜೊತೆ** ಸಮವಸ್ತ್ರ ಖರೀದಿಸಿ ವಿತರಿಸಲು ಶಾಲಾ ಎಸ್.ಡಿ.ಎಂ.ಸಿ ಖಾತೆಗಳಿಗೆ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಅನುದಾನ ಒದಗಿಸಲಾಗುತ್ತಿತ್ತು. 2021–22ನೇ ಸಾಲಿನಿಂದ ಸದರಿ ಅನುದಾನದಿಂದಲೇ 9 ಮತ್ತು 10ನೇ ತರಗತಿಯ ಮಕ್ಕಳಿಗೂ ಸೇರಿದಂತೆ ರಾಜ್ಯ ಮಟ್ಟದಲ್ಲಿ ನೇರವಾಗಿ ಸಮವಸ್ತ್ರ ಬಟ್ಟೆಗಳನ್ನು ಸರಬರಾಜು ಮಾಡಲಾಗುತ್ತಿದೆ.

ಪ್ರಸ್ತುತ 2023–24ನೇ ಸಾಲಿಗೂ ರಾಜ್ಯ ಮಟ್ಟದಲ್ಲಿ ಇ–ಟೆಂಡರ್ ಪ್ರಕ್ರಿಯೆ ಮುಖಾಂತರ ಆಯ್ಕೆಯಾಗಿರುವ ಸಂಸ್ಥೆಯಿಂದ ಸರ್ಕಾರಿ ಶಾಲೆಗಳಲ್ಲಿನ 1 ರಿಂದ 10ನೇ ತರಗತಿಯ ಎಲ್ಲಾ ಮಕ್ಕಳಿಗೆ **ಎರಡನೇ ಜೊತೆ** ಸಮವಸ್ತ್ರ ಬಟ್ಟೆಯನ್ನು ಆಗಸ್ಟ್ 2023ರ ಒಳಾಗಾಗಿ ಸರಬರಾಜು ಮಾಡಲು ಕಾರ್ಯಾದೇಶ ನೀಡಲಾಗಿದೆ, ಅದರಂತೆ ಸರಬರಾಜು ಮಾಡಲಾಗುತ್ತಿದೆ.

ಮಕ್ಕಳ ಭೌತಿಕ ಬೆಳವಣಿಗೆಯಲ್ಲಿ ವ್ಯತ್ಯಾಸವಾಗುವುದರಿಂದ ಹೊಲಿದ ಸಮವಸ್ತ್ರಗಳನ್ನು ಸರಬರಾಜು ಮಾಡುವುದು ಸಮಂಜಸವಾಗುವುದಿಲ್ಲ. ಈ ಹಿನ್ನಲೆಯಲ್ಲಿ ವಿವಿಧ ಅಳತೆಯ ಸಮವಸ್ತ್ರ ಬಟ್ಟೆಗಳನ್ನು ಮಾತ್ರ ಸರಬರಾಜು ಮಾಡಲಾಗುತ್ತಿದ್ದು, ಪೋಷಕರು ಮಕ್ಕಳ ಅಳತೆಗೆ ಅನುಸಾರವಾಗಿ ಸಮವಸ್ತ್ರಗಳನ್ನು ಹೊಲಿಸಿಕೊಳ್ಳುತ್ತಾರೆ.

**ಸಂಖ್ಯೆ : ಇಪಿ 63 ಎಂಪಿಇ 2023**

(ಎಸ್.ಮಧು ಬಂಗಾರಪ್ಪ)
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**